ದಾರರ ಕೈಕೆಳಗೆ ಕೆಲಸ ಮಾಡುತ್ತಿದ್ದಾರೆ ಅಲ್ಲಿರುವ ಗುತ್ತಿಗೆದಾರರು ಅವರಿಗೆ ಸಾಕಷ್ಟು ಸಹಾಯ ಸೌಲತ್ತುಗಳನ್ನು ಒದಗಿಸಿ ಕೊಟ್ಟಿದ್ದಾರೆ. ಸರ್ಕಾರದಿಂದಲೂ ಸಹ ಅವರಿಗೆ ದೊರೆಯಬಹುದಾದ ಎಲ್ಲಾ ಸಹಾಯ ಸೌಲಭ್ಯಗಳನ್ನು ಒದಗಿಸಿಕೊಡುವುದರಲ್ಲಿ ನಾವು ಹಿಂದೆಟುಂ ಹಾಕುವುದಿಲ್ಲ. ಮಾನ್ಯ ಸದಸ್ಯರು ಹೇಳಿದರು ಪೋಲೀಸ್ ತನಿಖೆ ಸರಿಯಾಗಿಲ್ಲವೆಂದು, ಆದರೆ ಇನ್ನೂ ತನಿಖೆ ನಡೆಯುತ್ತಿದೆ, ಸಂಬಂಧಪಟ್ಟ ಕಂಟ್ರ್ಯಾಕ್ಟರ್ ಯಾರಿದ್ದಾರೆ ಅವರ ಮೇಲೆ ಈಗಾಗಲೇ ಕ್ರಮ ಕೈಗೊಂಡು ಕೇಸ್ ಹಾಕಿದ್ದೇವೆ. ತನಿಖೆ ಮುಂದುವರಿದಿದೆ, ಯಾವುದೂ ಇನ್ನು ತೀರ್ಮಾನಕ್ಕೆ ಬಂದಿಲ್ಲ.

Constitution of a Committee for Water Tax

445. SRI M. S. ATMANANDA (Mandya).—Will the Minister of State for Major and Medium Irrigation be pleased to state :—

(*a*) whether it is a fact that assurances were given on the floor of this House that the Committee would be constituted by the Government to decide the water rates imposed on sugarcane and paddy crops ;

(*b*) if so, the reasons for not constituting this Committee so far ;

(*c*) when the Government will decide to constitute this Committee ?

SRI B.B. CHIMMANAKATTI (Minister of State for Major and Medium Irrigation).—

(*a*) Yes.

(*b*) This Committee has been constituted under the Chairmanship of Chief Minister *Vide* Government Order No. PWD 2 MLA 80, dated 10-4-1980.

(*c*) Does not arise in view of the reply to (*b*) above.

ಶ್ರೀ ಎಮ್.ಎಸ್. ಆತ್ಮಾನಂದ.—(ಆ)ಗೆ ಉತ್ತರದಲ್ಲಿ ೧೦ ನೇ ಏಪ್ರಿಲ್ ೧೯೮೦ ರಂದು ಸಮಿತಿಯನ್ನು ರಚಿಸಲಾಗಿದೆ ಎಂದು ಹೇಳಿದ್ದೀರಿ. ಆ ಸಮಿತಿಯಲ್ಲಿ ಸದಸ್ಯರು ಯಾರು ಯಾರಿದ್ದಾರೆ ಹಾಗೂ ಆ ಸಮಿತಿ ಎಷ್ಟು ಸಲ ಸಭೆ ಸೇರಿ ನೀರಿನ ದರದ ಬಗ್ಗೆ ಚರ್ಚೆ ಮಾಡಿ ನಿಗದಿ ಮಾಡಿದ್ದಾರೆಯೆಂಬುದನ್ನು ತಿಳಿಸಬೇಕು.

† ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಅಧ್ಯಕ್ಷರೇ, ಈ ನೀರಿನ ದರವನ್ನು ನಿಗದಿ ಮಾಡುವ ಸಲುವಾಗಿ ಮುಖ್ಯ ಮಂತ್ರಿಗಳವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಲಾಗಿದೆ. ಆದರಲ್ಲಿ ಯಾರು ಯಾರಿದ್ದಾರೆಂಬುದನ್ನು ಹೇಳುವುದಾದರೆ. ಆದರಲ್ಲಿ ಹಣಕಾಸಿನ ಮಂತ್ರಿಗಳವರು ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ರಾಜ್ಯ ಮಂತ್ರಿಗಳವರು. ರೆವಿನ್ಯೂ ಕಮಿಷನರ್, ಸೆಕ್ರೆಟರಿ ಫೈನಾನ್ಸ್ ಡಿಪಾರ್ಟ್‌ಮೆಂಟ್, ಮತ್ತು ಸೆಕ್ರೆಟರಿ ಪಬ್ಲಿಕ್ ವರ್ಕ್ಸ್ ಮತ್ತು ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್ ಮತ್ತೆ ಮಾನ್ಯ ಶ್ರೀ ಎಚ್.ಡಿ. ಚೌಡಯ್ಯ, ಶ್ರೀಮತಿ ಬಿ. ಬಸವರಾಜೇಶ್ವರಿ ಶ್ರೀ ಎಚ್.ಸಿ. ಶ್ರೀಕಂಠಯ್ಯ, ಶ್ರೀ ಆರ್.ಜಿ. ರಾಜಶೇಖರ್, ಶ್ರೀ ಎಲ್.ಎಸ್. ನಾಯಕ ಮತ್ತು ಶ್ರೀ ಜಿ.ಎಸ್. ದೇಶಮುಖ್. ಶ್ರೀ ಬಿ.ಆರ್. ಪಾಟೀಲ್ ಮತ್ತೆ ಅದರಲ್ಲಿ ಅಡಿಷನಲ್ ಸೆಕ್ರೆಟರಿ ಇರಿಗೇಷನ್ ಇವರೆಲ್ಲಾ ಆ ಸಮಿತಿಯಲ್ಲಿ ಸದಸ್ಯರಾಗಿದ್ದಾರೆ.

ಶ್ರೀ ಎಸ್.ಎಸ್. ಆತ್ಮಾನಂದ.—ನಾನು ತಮಗೆ ಕೇಳಿದೆ ಈ ಸಮಿತಿ ಎಷ್ಟು ಬಾರಿ ಸೇರಿತ್ತು. ಸಭೆ ಸೇರಿದಾಗ ನೀರಿನ ದರದ ಸಮಸ್ಯೆಯನ್ನು ಬಿಡಿಸುವುದಕ್ಕೆ ಪ್ರಯತ್ನ ಮಾಡಿತ್ತೇ ಇಲ್ಲವಿದ್ದರೆ ಈಗ ಪುನರ್ ವಿಮರ್ಶಿಸುವ ನೀರಿನ ದರವನ್ನು ಯಾವ ಆಧಾರದ ಮೇಲೆ ಫಿಕ್ಸ್ ಮಾಡಲಾಗಿದೆ?

ಶ್ರೀ ಬಿ. ಬಿ. ಚಿಮ್ಮನ ಕಟ್ಟಿ.—ಈ ಸಮಿತಿ ರಚನೆಯಾದ ನಂತರ ಯಾವುದೇ ಒಂದು ಸಭೆ ಸಚಿವಿಲ್ಲ ಆದರೂ ಕೂಡ ಕ್ಯಾಬಿನೆಟ್‌ನ ಸಬ್ ಕಮಿಟಿ ಒಂದನ್ನು ಮಾಡಿ ಅದರಲ್ಲಿ ರೈತರಿಂದ ಬರತಕ್ಕ ಎಲ್ಲಾ ಮನವಿಗಳನ್ನೂ ಮತ್ತು ಶಾಸಕರು ಮಂತ್ರಿಗಳಿಂದ ಬರತಕ್ಕ ಎಲ್ಲಾ ಮನವಿಗಳನ್ನು ತೆಗೆದುಕೊಂಡು ೨೯ನೇ ಡಿಸೆಂಬರ್ ೧೯೬೦ ರಂದು ವಾಟರ್ ರೇಟ್ ಬಗ್ಗೆ ಆಜ್ಞೆಯನ್ನು ಮಾಡಿದರು. ತದ ನಂತರ ಮತ್ತೊಂದು ಸಾರಿ ನೀರಿನ ದರವನ್ನು ಪುನರ್ ವಿಮರ್ಶೆ ಮಾಡಿ ಅದನ್ನು ಆಜ್ಞೆಯನ್ನು ಮಾಡಿದ್ದಾರೆ.

ಶ್ರೀ ಹೆಚ್.ಡಿ. ಚೌಡಯ್ಯ.—ಈ ಸಮಿತಿ ಎಷ್ಟು ಸಾರಿ ಸಭೆ ಸೇರಿದೆ ಎಂಬುದಕ್ಕೆ ಸಭೆ ಸೇರಿಲ್ಲ ಎಂದು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಇದರ ಹಿನ್ನೆಲೆಯಲ್ಲಿ ಕಳೆದ ಮಾರ್ಚ್ ಅಧಿವೇಶನದಲ್ಲಿ ನಾವು ಏನು ೫೧೨ನೇ ನಿಯಮದ ಕೆಳಗಡೆ ವಿಷಯವನ್ನು ಪ್ರಸ್ತಾಪ ಮಾಡಿದ್ದೆವು; ಆದಕ್ಕನುಗುಣವಾಗಿ ಮಾನ್ಯ ಮುಖ್ಯ ಮಂತ್ರಿಗಳು ಎರಡೂ ಸದನದ ಸದಸ್ಯರನ್ನೊಳಗೊಂಡ ಒಂದು ಜಂಟಿ ಸಮಿತಿಯನ್ನು ನೇಮಿಸಿ ಅದಕ್ಕೆ ಅವರೇ ಅಧ್ಯಕ್ಷರಾದರು. ಆ ಬಗ್ಗೆ ೧೦-೪-೧೯೬೦ ರಲ್ಲಿ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಹೀಗೆ ಆ ಸಮಿತಿ ರಚನೆಯಾದ ಮೇಲೆ ಒಂದು ಸಾರಿಯೂ ಸಭೆ ಸೇರದೆ ಕಳೆದ ಡಿಸೆಂಬರ್ ೨೬ ರಲ್ಲಾಗಲೀ ಅಥವಾ ಜನವರಿ ೧೨ ರಲ್ಲಾಗಲೀ ಕ್ಯಾಬಿನೆಟ್‌ನಲ್ಲಿ ಅಥವಾ ಸರ್ಕಾರದ ಯಾವುದೇ ಮಟ್ಟದಲ್ಲಾದರೂ ತೀರ್ಮಾನ ಕೈಗೊಳ್ಳತಕ್ಕದ್ದು ಹಕ್ಕುಚ್ಯುತಿ ಯಾಗುತ್ತದೆಂದು ಹೇಳಬೇಕಾಗಿದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಸಮಿತಿಯನ್ನು ರಚಿಸಿದ ಬಳಿಕ ಅದೇ ವೇಳೆಯಲ್ಲಿ ರೈತರ ಪರಿಷತ್ತು ಮತ್ತು ರೈತರ ಚಳುವಳಿ ನಡೆದಿದ್ದರಿಂದ ಆ ಸಂದರ್ಭದಲ್ಲಿ ಈ ಬಗ್ಗೆ ಯಾವುದಾದರೂ ಒಂದು ಕ್ರಮ ಕೈಗೊಳ್ಳಬೇಕೆಂದು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿಕೊಂಡು ಜೊತೆಗೆ ಇನ್ನಿತರ ಶಾಸಕರ ಮತ್ತು ರೈತ ಮುಖಂಡರ ಸಲಹೆ ತೆಗೆದುಕೊಂಡು ಎಲ್ಲ ವಿಷಯಗಳನ್ನು ಚರ್ಚಿಸಿ ನೀರಿನ ದರವನ್ನು ನಿಗದಿ ಮಾಡಿದ್ದೇವೆ. ತಾವು ಕೂಡ ಯಾವುದಾದರೂ ಸಲಹೆ ಕೊಟ್ಟರೆ ಸರ್ಕಾರ ಅದನ್ನು ಸ್ವಾಗತಿಸುತ್ತದೆ.

ಶ್ರೀ ಹೆಚ್.ಡಿ. ಚೌಡಯ್ಯ.—ಎರಡೂ ಸದನಗಳ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಿರುವ ಕಾಲದಲ್ಲಿ, ಈ ರೀತಿ ತೀರ್ಮಾನ ಕೈಗೊಂಡಿರುವುದು ಈ ಸಭೆಗೆ ಸರ್ಕಾರದ ಪರವಿಂದ ಅಗೌರವವಾಗಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಇದು ಸಭೆಯ ಗೌರವದ ಪ್ರಶ್ನೆ. ಈ ಬಗ್ಗೆ ಅನೇಕ ರೈತ ಸಮಿತಿಗಳು ಮತ್ತು ಬೇರೆ ಬೇರೆ ಸಮಿತಿಗಳು ಮನವಿ ಕೊಟ್ಟಿದ್ದಾರೆ ಮತ್ತು ಶಾಸನ ಸಭೆಯಲ್ಲಿ ಕೂಡ ೫೧೨ ನೇ ನಿಯಮಾವಳಿ ಕೆಳಗಡೆ ಪ್ರಸ್ತಾಪ ಮಾಡಿದ್ದಾರೆ; ಆ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳು ನೀಡಿದ ಆಶ್ವಾಸನೆ ಮೇರೆಗೆ ಈ ಸಮಿತಿಯನ್ನು ಮಾಡಲಾಗುತ್ತಿದೆ ಎಂದು ಸರ್ಕಾರೀ ಆಜ್ಞೆಯ ಪ್ರಿಯಾಂಬಲ್‌ನಲ್ಲಿ ಕೂಡ ಹೇಳಿದ್ದಾರೆ. ಹೀಗಿರುವಾಗ ಆ ಸಮಿತಿ ಸಭೆ ಸೇರದೆ ಸರ್ಕಾರದ ಮಟ್ಟದಲ್ಲಿ ಈ ಬಗ್ಗೆ ತೀರ್ಮಾನ ಕೈಗೊಂಡಿರುವುದು ಹಕ್ಕು ಚ್ಯುತಿ ಆಗಲಿಲ್ಲವೆ? ಇದು ಸದನಕ್ಕೆ ಅಗೌರವ ತರುವ ಪ್ರಶ್ನೆ ಅಲ್ಲವೆ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಸಮಿತಿಯನ್ನು ರಚಿಸಲಾಗಿದೆ. ಅದು ಇನ್ನಾವರೂ ಕೂಡ ಸೇರ ಬಹುದು. ವಿಷಯಗಳನ್ನು ಚರ್ಚಿಸಬಹುದು. ಸಭೆಯ ಗೌರವಕ್ಕೆ ಧಕ್ಕೆ ಬರತಕ್ಕ ಕೆಲಸವನ್ನು ಸರ್ಕಾರ ಏನು ಮಾಡುವುದಿಲ್ಲ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಮಾನ್ಯ ಮಂತ್ರಿಗಳು ಉತ್ತರ ಕೊಡುವುದನ್ನು ನೋಡಿದರೆ ಬೇಸರ ಕಾಣುತ್ತದೆ. ಈ ಸದನದಲ್ಲಿ ಏನು ಸಮಿತಿ ಮಾಡಲಾಗಿದೆ ಅದು ಬೇಕಾದರೆ ಸೇರಬಹುದು, ಬೇಡವಾದರೆ ಬಿಡಬಹುದೆಂಬ ಉತ್ತರ ಸಭೆಗೆ ಅಗೌರವ ತರತಕ್ಕ ಉತ್ತರ. ಇದನ್ನು ಸೀರಿಯಸ್ ಆಗಿ ತೆಗೆದುಕೊಳ್ಳಬೇಕು. ಇದನ್ನು ಯಾವ ರೀತಿ ತೆಗೆದುಕೊಂಡು ಹೋಗುತ್ತೀರಿ ಮತ್ತು ಇದಕ್ಕೆ ಗೌರವ ಕೊಡುತ್ತೀರೋ ಇಲ್ಲವೋ ವಿಷಯವನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಸರ್ಕಾರ ಅದಕ್ಕೆ ಗೌರವ ಕೊಡುತ್ತದೆಂದು ಸ್ಪಷ್ಟವಾಗಿ ಹೇಳುತ್ತಿದ್ದೇವೆ; ಕೊಡುವುದಿಲ್ಲವೆಂದು ಹೇಳಿಲ್ಲ. ಖಂಡಿತ ಗೌರವ ಕೊಡುತ್ತದೆ. ವಿರೋಧ ಪಕ್ಷದವರಿಗೆ ಇನ್ನೂ ಹೆಚ್ಚಿನ ಗೌರವ ಕೊಡುತ್ತದೆ.

ಶ್ರೀ ಎಂ.ಎಸ್. ಆತ್ಮಾನಂದ.—ನಾನು ಕೇಳಿದ ಪ್ರಶ್ನೆಗೆ ಸರಿಯಾಗಿ ಉತ್ತರ ನೀಡಲಿಲ್ಲ. ನೀರಿನ ದರವನ್ನು ಯಾವ ಆಧಾರದ ಮೇಲೆ ಸರ್ಕಾರ ನಿಗದಿ ಮಾಡಿದೆ? ಈ ಬಗ್ಗೆ ಒಂದು ಸಮಿತಿ ರಚನೆಯಾಗಿರುವಾಗ ಅದರ ಸಲಹೆಯನ್ನು ತೆಗೆದುಕೊಳ್ಳದೆ ಸರ್ಕಾರ ಏಕಪಕ್ಷೀಯವಾಗಿ ೭೭–೧೨–೧೯೮೦ರಿಂದ ನೀರಿನ ತೆರಿಗೆಯನ್ನು ವಿಧಿಸಿರುವುದು ಸರಿಯೆ?

ಶ್ರೀ ಬಿ ಬಿ. ಚಿಮ್ಮನಕಟ್ಟಿ.—ಅದನ್ನು ಮಾನ್ಯ ಮುಖ್ಯ ಮಂತ್ರಿಗಳೊಡನೆ ಸಮಾಲೋಚನೆ ಮಾಡಿ ಹೇಳುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ.—ಹಾಗಾದರೆ ಈ ಪ್ರಶ್ನೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಬರುವವರೆಗೆ ಮುಂದಕ್ಕೆ ಹಾಕಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಯಾವುದೇ ಸದಸ್ಯರಾದರೂ ತಮ್ಮ ಅಭಿಪ್ರಾಯಗಳೇನಾದರೂ ಇದ್ದರೆ ಕೊಡಬಹುದು. ಮಾನ್ಯ ಮುಖ್ಯ ಮಂತ್ರಿಗಳೊಡನೆ ಸಮಾಲೋಚನೆ ಮಾಡಿ ತಮ್ಮನ್ನು ಕರೆದು ಮಾತನಾಡುತ್ತೇನೆ.

ಶ್ರೀ ಎಂ.ಎಸ್ ಆತ್ಮಾನಂದ.—ಬೇಕಾದರೆ ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಚರ್ಚೆ ಮಾಡಬಹುದು; ಆ ಪ್ರಶ್ನೆ ಬೇರೆ ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆ ನೀಡಬೇಕು. ಅದನ್ನು ಇಂದಾದರೂ ನೀಡಲಿ ಅಥವಾ ಸೋಮವಾರವಾದರೂ ನೀಡಲಿ. ಅಲ್ಲಿಯವರೆಗೆ ಈ ಪ್ರಶ್ನೆಯನ್ನು ತಡೆಹಿಡಿಯಿರಿ.

ಶ್ರೀ ಹೆಚ್.ಎಲ್. ತಿಮ್ಮೇಗೌಡ.—ಸದನದ ಸಮಿತಿಯವರು ಶಿಫಾರಸ್ಸು ಮಾಡಿದ ಮೇಲೆ ಸರ್ಕಾರದವರು ಪರಿಶೀಲನೆ ಮಾಡುವವರೆಗೆ, ಈಗ ಪಸೂಲಿ ಕಾರ್ಯವನ್ನು ಏನು ಪುರು ಮಾಡಿದ್ದಾರೆ ಅದನ್ನು ತಡೆಹಿಡಿದರೆ ಒಳ್ಳೆಯದು. ಅದನ್ನಾದರೂ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟರೆ ಸಾಕು.

ಶ್ರೀ ಕಾಗೋಡು ತಿಮ್ಮಪ್ಪ.—ಈ ಸದನದ ಸಮಿತಿ ನೇಮಕವಾಗಿದೆ. ಅದು ಸಭೆ ಸೇರಿ ಪರಿಶೀಲನೆ ಮಾಡುವುದರಲ್ಲಿ ಏನು ಆತಂಕ ಇಲ್ಲ. ಸಮಿತಿಯನ್ನೇನು ನಾವು ರದ್ದು ಮಾಡಿಲ್ಲ. ಈಗ ಏನು ಒಂದು ನೀರಿನ ದರವನ್ನು ನಿಗದಿ ಮಾಡಿದ್ದೇವೆ ಅದನ್ನು ಮಾಡುವಾಗ ವೈಜ್ಞಾನಿಕವಾಗಿ ಮತ್ತು ಎಲ್ಲ ಅಂಕಿಅಂಶಗಳನ್ನು ಇಟ್ಟುಕೊಂಡು ಅವುಗಳ ಆಧಾರದ ಮೇಲೆ ತೀರ್ಮಾನ ಮಾಡಿದ್ದೇವೆ. ಅದರಲ್ಲಿ ಏನಾದರೂ ಲೋಪದೋಷಗಳು ಇವೆ ಎಂದರೆ ಪುನರ್ ಪರಿಶೀಲನೆ ಮಾಡುವುದಕ್ಕೆ ಅಥವಾ ಬದಲಾವಣೆ ಮಾಡುವುದಕ್ಕೆ ಯಾವತ್ತೂ ಅವಕಾಶ ಇದೆ ಇವತ್ತು ನಾವು ಎಲ್ಲ ಆಧಾರಗಳನ್ನು ಇಟ್ಟುಕೊಂಡು ಒಂದು ವ್ಯವಸ್ಥಿತವಾದ ರೀತಿಯಲ್ಲಿ ತೀರ್ಮಾನ ಮಾಡಿದ್ದೇವೆ. ಸಮಿತಿ ಕೂಡ ಇದೆ, ಅದೂ ಸಹ ಸಭೆ ಸೇರಿ ಅಭಿಪ್ರಾಯ ವ್ಯಕ್ತಪಡಿಸಬಹುದು.

ಶ್ರೀ ಬಿ ವಿ. ಕಕ್ಕಿಲಾಯ.—ಸಮಿತಿಯನ್ನು ರಚನೆ ಮಾಡಿದ್ದೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಸಮಿತಿ ಇದೆ, ಇಲ್ಲವೆಂಬ ಪ್ರಶ್ನೆ ಇಲ್ಲ. ಸಮಿತಿ ರಚನೆಯಾಗಿ ಒಂದು ವರ್ಷವಾಯಿತು. ಅದರ ಶಿಫಾರಸ್ಸಿನ ಮೇಲೆ ಏನು ಮಾಡಿದ್ದೀರಿ? ಏನೂ ಮಾಡಿಲ್ಲ ಸರ್ಕಾರದವರೇ ನೀರಿನ ದರವನ್ನು ಜಾಸ್ತಿ ಮಾಡಿದ್ದಾರೆಂಬುದು ನಮ್ಮ ಅಭಿಪ್ರಾಯ. ಆದ್ದರಿಂದ, ಈ ವಿಚಾರ ಸಮಿತಿಯು ಮುಂದೆ ಹೋಗಿ ತೀರ್ಮಾನವಾಗುವವರೆಗೆ ಇದನ್ನು ತಡೆ ಹಿಡಿಯುತ್ತೀರಾ? ಇಲ್ಲದಿದ್ದರೆ, ಆ ಸಮಿತಿಯಾದರೂ ಏಕೆ ಇರಬೇಕು? ಈಗ ತಾವು ಏನು ದರವನ್ನು ಹೆಚ್ಚು ಮಾಡಿದ್ದೀರಿ ಅದು ಬಹಳ ದುಬಾರಿಯಾಗಿದೆ.

ಉಪಾಧ್ಯಕ್ಷರು.—ಈ ಪ್ರಶ್ನೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಬರುವವರೆಗೆ ತಡೆಹಿಡಿಯಲಾಗಿದೆ.